ರಸ್ತೆಗಳ ಬದಿಯಲ್ಲಿ ಕೆಲಸ ಪೂರ್ತಿಯಾಗಿ ಸ್ಥಗಿತಗೊಂಡಿದೆ. ಈ ರಸ್ತೆಯ ಕೆಲಸ ಸುಮಾರು ೨೦ ವರ್ಷಗಳಿಂದ ನಡೆಯುತ್ತಿದೆ. ಮತ್ತು ಈ ೩೨೫ ಮೊಟರ್ ರಸ್ತೆಯ ಸ್ಟೇ ಆರ್ಡರ್‌ನ್ನು ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಮೂರನೆಯ ಪ್ರಶ್ನೆಗೆ ನಾನು ನೇರವಾಗಿ ಉತ್ತರ ಹೇಳುವುದಾದರೆ ೩೨೫ ಮೊಟರ್ ರಸ್ತೆಗೆ ಹೈಕೋರ್ಟಿನಲ್ಲಿ ಸ್ಟೇ ಆರ್ಡರ್ ಇದೆ. ಆ ಸ್ಟೇ ಆರ್ಡರ್ ವೆಕೇಟ್ ಆದ ತಕ್ಷಣವೇ ನಾನು ಕೆಲಸ ಪ್ರಾರಂಭ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಎರಡೂ ಬದಿಗಳಲ್ಲಿ ಕೆಲಸ ಸ್ಥಗಿತಗೊಂಡಿದೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಅದನ್ನು ಸಹ ಈ ೩೨೫ ಮೊಟರ್ ಕೆಲಸದಲ್ಲಿಯೇ ಸೇರಿಸಿಕೊಂಡು ಮಾಡಿಸೋಣ. ಆದರೆ ಮೂರು ಸ್ಥಳಗಳಲ್ಲಿ ಕೆಲಸ ತಟಸ್ಥವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಅವರ ಕಾಳಜಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಏನೇನು ಕೆಲಸ ಆಗಿದೆ ಎನ್ನುವ ಬಗ್ಗೆ ಬೇಕಾದರೆ ನನ್ನಲ್ಲಿ ಪಟ್ಟಿ ಇದೆ. ಅದನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಕೆಲಸ ನಡೆಯುತ್ತಿದೆ, ಈ ಕೆಲಸಗಳಲ್ಲಿ ಲೋಕೋಪಯೋಗಿ ಇಲಾಖೆಯ ಭಾಗಿಲು ಮಚ್ಚಿಲ್ಲ. ಅಲ್ಲ ಯಾವ ಕೆಲಸಗಳು ನಡೆಯುತ್ತಿವೆಯೋ ಅವುಗಳ ಪಟ್ಟಿಯನ್ನು ಬೇಕಾದರೆ ನಾನು ಕೊಡುತ್ತೇನೆ.

ಶ್ರೀ ವಸಂತ ವಿ ಸಾಲಿಯಾನ್.—ಸ್ವಾಮಿ ನಾನು ಮೇಲೆ ಹೇಳಿದ ಮೂರು ಕಡೆಗಳಲ್ಲಿ ಕೆಲಸ ಸ್ಥಗಿತಗೊಂಡಿದೆ. ಮತ್ತು ಕೆಲವು ಸೇತುಬಂದಿ ಕೆಲಸಗಳು ಕೂಡ ಸ್ಥಗಿತಗೊಂಡಿವೆ. ಈ ಸ್ಥಗಿತಗೊಂಡಿರುವ ಕೆಲಸಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮೂರು ಕೆಲಸಗಳು ಸ್ಥಗಿತಗೊಂಡಿದೆ ಎಂದು ಹೇಳಿದ್ದಾರೆ. ಮತ್ತು ಸೇತುಬಂದಿಗಳ ಕೆಲಸ ಕೂಡ ಸ್ಥಗಿತ ಗೊಂಡಿದೆ ಎಂದು ಹೇಳಿದ್ದಾರೆ. ಆ ಕೆಲಸಗಳನ್ನು ನಾವು ಮೆರಿಟ್ ಮೇಲೆ ಪರಿಶೀಲನೆ ಮಾಡಬೇಕಾಗುತ್ತದೆ. ಸಧ್ಯಕ್ಕೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಮಂಜೂರಾತಿಯನ್ನು ಕೊಡಬೇಕಾಗಿದೆ. ಈಗ ಅಲ್ಲಿ ನಡೆಯುತ್ತಿರುವ ಕೆಲಸಗಳ ಪಟ್ಟಿಯನ್ನು ಕೊಡುತ್ತೇನೆಂದು ನಾನು ಹೇಳಿದೆ.

ಹುಕ್ಕೇರಿ ತಾಲ್ಲೂಕಿನ ಮಣಗುತ್ತಿ ಹಶ್ತಿರ ಏತ ನೀರಾವರಿ ಯೋಜನೆ ಬಗ್ಗೆ.

೨೯೧. ಶ್ರೀ ಮಲ್ಲಾರ ಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಣಗುತ್ತಿ ಯಾತ ನೀರಾವರಿ ಕೆಲಸದ ನೀಲನಕ್ಷೆ ತಯಾರು ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು, ಮತ್ತು ಈ ಯೋಜನೆಗೆ ತಗಲುವ ಹಣದ ಪೊತ್ತವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಯ ಪೂರ್ವಭಾವಿ ತನಿಖೆ ಮಡೆದಿದೆ. ಇದರ ಪ್ರಕಾರ ಈ ಯೋಜನೆಯ ಅಂದಾಜು ಸುಮಾರು ೩೫,೦೦,೦೦೦ ರೂ.ಗಳು ಮತ್ತು ನೀರಾವರಿಯಾಗುವ ಕ್ಷೇತ್ರ ೭೬೮ ಹೆಕ್ಟೇರುಗಳು.

ಶ್ರೀ ಮಲ್ಲಾರಗೌಡ, ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಣಗುತ್ತಿ ನೀರಾವರಿ ಯೋಜನೆಗೆ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಆಗಿದೆ ಎಂದು ಹೇಳಿದ್ದಾರೆ, ಇದು ಆಗಿ ಎಷ್ಟು ವರ್ಷ ಆಯಿತು. ಇದು ಘಟಪ್ರಭಾ ಪುನರ್ ನಿವೇಶನ ಕೇಂದ್ರಕ್ಕೆ ಬರುವುದರಿಂದ ಇದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕೆಂದು, ಇದಕ್ಕಾಗಿ ವಿಶೇಷ ಕಾರ್ಯಕ್ರಮ ಏನಾದರೂ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. ಇದಕ್ಕೆ ಇರತಕ್ಕ ಅಡಚಣೆ ಏನು ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಅಡಚಣೆ ಏನೂ ಇಲ್ಲ. ಹಣದ ಅಡಚಣೆ ಮಾತ್ರ ಇದೆ. ಆನ್ ಗೋಯಿಂಗ್ ವರ್ಕ್ಸ್‌ನ್ನು ಮುಂದುವರಿಸುತ್ತಿದ್ದೇವೆ. ನಿನ್ನೆ ನಿಮ್ಮ ನಾಯಕರು ಎಷ್ಟು ಚರ್ಚೆ ಮಾಡಿರುತ್ತಾರೆ ?

ಶ್ರೀ ಪಲ್ಲಾರಗೌಡ. ಎಸ್. ಪಾಟೀಲ್.—ಹಣದ ಕೊರತೆ ಇರಬಹುದು ಆದರೆ ಇದು ಪ್ರಮುಖವಾದ ಯೋಜನೆ. ಇದು ಘಟಪ್ರಭಾ ಯೋಜನೆ ಪುನರ್ ನಿವೇಶನ ಕೇಂದ್ರದಲ್ಲಿರುವುದರಿಂದ ಇದಕ್ಕೆ ವಿಶೇಷವಾದ ಹಣದ ವ್ಯವಸ್ಥೆಯನ್ನು ಮಾಡಬೇಕು. ಹಣದ ಕೊರತೆ ಇರಬಹುದು. ಆದರೆ ಇಲ್ಲಿ ಬಂದಂಥ ಜನ ಯಾರಿದ್ದಾರೆ ಎಂಬುದನ್ನು ತಿಳಿದುಕೊಂಡು ಅವರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ನಿರ್ಣಯ ಮಾಡುತ್ತೇನೆ.

ದಾಂಡೇಲಿ ಅಭಯಾರಣ್ಯದಲ್ಲಿ ಸೇರಿರುವ ಸೂಪಾ ತಾಲ್ಲೂಕಿನ ಜಮೀನುಗಳು

೫೫೭. ಶ್ರೀ ಪ್ರಭಾಕರ್ ರಾಣೆ (ಕಾರವಾರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ದಾಂಡೇಲಿ ಅಭಯಾರಣ್ಯದಲ್ಲಿ ಸೇರಿರುವ ಸೂಪಾ ತಾಲ್ಲೂಕಿನ ಭೂ ವಿಭಾಗದ ವಿಸ್ತೀರ್ಣ ಎಷ್ಟು ?

ಆ) ಈ ಕ್ಷೇತ್ರದಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ ಎಷ್ಟು ? ಹಾಗೂ ಅವರು ಸಾಗುವಳಿ ಮಾಡುವ ಒಟ್ಟು ವಿಸ್ತೀರ್ಣವೆಷ್ಟು ?

ಇ) ಇದರಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಅತಿಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಈ) ಇದರಲ್ಲಿ ಎಷ್ಟು ಜಮೀನನ್ನು ಸಾಗುವಳಿಗೆ ಕ್ರಮಬದ್ಧಗೊಳಿಸಲಾಗಿದೆ ?

ಉ) ಅರಣ್ಯ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳನ್ನು ಸ್ಥಳಾಂತರಿಸುವ ನಿರ್ಣಯವನ್ನು ಸರ್ಕಾರದವರು ಕೈಗೊಂಡಿದ್ದಾರೆಯೇ ?

ಊ) ಹಾಗಿದ್ದಲ್ಲಿ ಸ್ಥಳಾಂತರಿಸಲ್ಪಡುವ ಜನರಿಗೆ ಪುನರ್ವಸತಿ ವ್ಯವಸ್ಥೆಯನ್ನು ಸರಕಾರದವರು ಕೈಗೊಂಡಿದ್ದಾರೆಯೇ ?

ಶ್ರೀ ಬಿ: ಎ. ಜೀವಿಜಯ (ಅರಣ್ಯಮಂತ್ರಿಗಳು).—

ಅ) ೧೫೭೩.೧೨ ಚದರ ಕಿಲೋಮೀಟರುಗಳು.

ಆ) ೧೪೨ ಕುಟುಂಬಗಳು. ಸಾಗುವಳಿಯಲ್ಲಿರುವ ಭೂಪ್ರದೇಶ ವಿಸ್ತೀರ್ಣ ೨೯.೭೨ ಕಿಲೋಮೀಟರುಗಳು.

ಇ) ೨೭೪.೫೫ ಎಕರೆ ಅರಣ್ಯ ಪ್ರದೇಶ ಮತ್ತು ೫೮೦ ಎಕರೆ ೧೬ ಗುಂಟೆ ಕಂದಾಯ ಇಲಾಖೆಯ ಭೂಮಿಯ ಅನಧಿಕೃತ ಸಾಗುವಳಿಯಲ್ಲಿ ಇವೆ.

ಈ) ಮೇಲೆ ಹೇಳಿದ ಪ್ರದೇಶವನ್ನು ಈವರೆಗೆ ಕ್ರಮಬದ್ಧಗೊಳಿಸಿಲ್ಲ.

ಉ) ದಾಂಡೇಲಿ ಅಭಯಾರಣ್ಯದ ಪ್ರದೇಶದಲ್ಲಿ ಮಾತ್ರ ವಾಸಿಸುತ್ತಿರುವ ಕುಟುಂಬಗಳನ್ನು ಸ್ಥಳಾಂತರಗೊಳಿಸಲು ನಿರ್ಣಯಿಸಲಾಗಿದೆ. ಇತರ ಅರಣ್ಯ ಪ್ರದೇಶಗಳಲ್ಲಿ ಏಪ್ರಿಲ್ ೧೯೭೮ರ ಹಿಂದಿನಿಂದ ವಾಸಿಸುತ್ತಿರುವ ಕುಟುಂಬಗಳು ಅರಣ್ಯದ ಒಳಭಾಗದಲ್ಲಿದ್ದರೆ ಅಂತಹವುಗಳನ್ನು ಸ್ಥಳಾಂತರಿಸಲು ನಿರ್ಣಯಿಸಲಾಗಿದೆ. ಆದರೆ ಇವರಾರನ್ನು ಇನ್ನೂ ಹೊರಹಾಕಿಲ್ಲ.

ಊ) ಸದ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.